**CFC.R.P.67** ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಪ್ಪಳ

ಎಸ್ .ಸಿ. ನಂಃ **18/2017**

Form No.4(Civil)
Deposition Sheets
(R.P.No.57)

ಪಿ.ಡಬ್ಲ್ಯೂ ನಂಃ**09**
ಸಿ.ಡಬ್ಲ್ಯೂ ನಂಃ**14**

ಸಾಕ್ಷಿಯನ್ನು ದಿನಾಂಕಃ **26-05-2026**
ರಂದು ಪ್ರತಿಜ್ಞೆ ಮಾಡಿಸಲಾಯಿತು

ಸಾಕ್ಷಿದಾರನ ಹೆಸರು ಃ ಶಾಂತಪ್ಪ
ತಂದೆಯ ಹೆಸರು ಃ ಶಂಕ್ರಪ್ಪ ಬೆಲ್ಲದ
ವಯಸ್ಸು ಃ **66** ವರ್ಷ

ಉದ್ಯೋಗ ಃ ನಿವೃತ್ತ ಎ.ಎಸ್.ಐ
ವಾಸ ಸ್ಥಳ ಃ ಬಾಗೇನಹಳ್ಳಿ

ಸಾಕ್ಷಿಯ ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರವರಿಂದ

ನಾನು ದಿಃ **2016** ರಿಂದ **2018** ರ ವರೆಗೆ ನಾನು ಹನುಮಸಾಗರ ಪೊಲೀಸ ಠಾಣೆಯಲ್ಲಿ ಎ.ಎಸ್.ಐ ಆಗಿ ಕೆಲಸ ಮಾಡಿದ್ದೇನೆ.

**2).** ದಿಃ**27-09-2016** ರಂದು ಚಾಸಾ **15** ರವರು ರಜೆ ಮೇಲೆ ಹೋದಾಗ ಆ ದಿನ ನನಗೆ ಬಾತ್ಮಿ ಬಂದ ಮೇರೆಗೆ **1** ನೇ ಆರೋಪಿಯನ್ನು ಗುಡ್ಡದ ದೇವಲಾಪುರ ಕ್ರಾಸ್ ಬಳಿ ಸಂಜೆ **7.20** ಕ್ಕೆ ವಶಕ್ಕೆ ಪಡೆದು ಠಾಣೆಗೆ **8.00** ಗಂಟೆಗೆ ಕರೆದುಕೊಂಡು ಬಂದು ದಸ್ತಗಿರಿ ಕ್ರಮ ಅನುಸರಿಸಿ ಆತನನ್ನು ದಸ್ತಗಿರಿ ಮಾಡಿದೆ. ನಂತರ ಆತನನ್ನು ನ್ಯಾಯಾಂಗದ ಬಂಧನಕ್ಕಾಗಿ ನ್ಯಾಯಾಲಯದ ಮುಂದೆ ಹಾಜರುಪಡಿಸಲು ಕ್ರಮ ತೆಗೆದುಕೊಂಡೆ. ನಂತರ ಚಾಸಾ **15** ರವರು ತನಿಖೆ ಮುಂದಿವರೆಸಿರುತ್ತಾರೆ. ನಾನು ದಸ್ತಗಿರಿ ಮಾಡಿದ **1** ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

ಪಾಟೀ ಸವಾಲು ಃ ಆರೋಪಿತರ ಪರ ಶ್ರೀ ಬಿ ಕೆ ಡಿ ವಕೀಲರಿಂದ

**3).** ನನಗೆ ಯಾವುದೇ ಬಾತ್ಮಿ ಬಂದಿರಲಿಲ್ಲ ಎಂದರೆ ಸರಿಯಲ್ಲ. **1** ನೇ ಆರೋಪಿ ಯಾವುದೇ ಅಪರಾದ ಮಾಡದೆ ಇದ್ದರೂ ರಾಜಕೀಯ ಒತ್ತಡದಿಂದ

ಆತನನ್ನು ಈ ಸುಳ್ಳು ಕೇಸಿನಲ್ಲಿ ಸೇರಿಸಲಾಯಿತು ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತ ಉಲ್ಲೇಖನದ ಮೇರೆಗೆ ಸಾಕ್ಷ್ಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

(ಚಂದ್ರಶೇಖರ ಸಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಕೊಪ್ಪಳ